## ಉಪಯೋಗಿ ಕಾರ್ಯಕ್ರಮ

ಪ್ರತಿದಿನ ಮಧ್ಯಾಹ್ನ ಎರಡು ಗಂಟೆಯಿಂದ ಅರ್ಧ ತಾಸು 'ಚಂದನ ವಾಹಿನಿ'ಯಲ್ಲಿ 'ಕಾನೂನಿನ ಕಣ್ಣು' ಎಂಬ ಕಾರ್ಯಕ್ರಮ ಪ್ರಸಾರ ಆಗುತ್ತಿದೆ. ವಿವಾಹ, ವಿಚ್ಛೇದನ, ಪಾಲಾಗುವಿಕೆ, ನಿರ್ವಹಣಾ ಮೊತ್ತ (ಮೆಂಟೇನನ್ಸ್) ಹೀಗೆ ಸಾಮಾನ್ಯವಾಗಿ, ಎಲ್ಲ ತರಹದ ಕಾನೂನು ಸಮಸ್ಯೆಗಳ ಬಗ್ಗೆ ಈ ಕಾರ್ಯಕ್ರಮದಲ್ಲಿ ನುರಿತ ವಕೀಲರು ಸಲಹೆ ನೀಡುತ್ತಾರೆ. ಅಭಿಪ್ರಾಯ ಹೇಳುತ್ತಾರೆ. ಕೆಲವು ಹೊಸ ಕಾನೂನಿನ ಬಗ್ಗೆಯೂ ಹೇಳುತ್ತಾರೆ. ಸಾರ್ವಜನಿಕರು ಮತ್ತು ಕಾನೂನು ವಿದ್ಯಾರ್ಥಿಗಳಿಗೆ ಅತ್ಯುಪಯೋಗಿ. ಹಾಗಾಗಿ, ನೋಡಲೇಬೇಕಾದ ಕಾರ್ಯಕ್ರಮ.

—ನಾರಾಯಣಯಾಜಿ, ಶಿರಾಲಿ

## ವೀಕೆಂಡ್ ಸಂತೋಷ

ಝೀ ಕನ್ನಡ ವಾಹಿನಿಯಲ್ಲಿ 'ವೀಕೆಂಡ್ ವಿಥ್ ರಮೇಶ್' 3ನೇ ಭಾಗ ಪ್ರಸಾರವಾಗುತ್ತಿದೆ. ಈ ವಾರದ ಕಾರ್ಯಕ್ರಮದಲ್ಲಿ ನಿಷ್ಠುರ, ನಿರ್ಭಯ ಮತ್ತು ದಕ್ಷ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಕರ್ನಾಟಕದ ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ಸಂತೋಷ ಹೆಗಡೆಯವರನ್ನು ಪರಿಚಯಿಸಿದ್ದು ಸಾಧಕರಿಗೆ ನಿಜವಾಗಿಯೂ ಸಂದ ಗೌರವವಾಗಿದೆ. ಭ್ರಷ್ಟತೆ, ಮೋಸ ವಂಚನೆ ತುಂಬಿದ ಈ ಪ್ರಸ್ತುತ ಸಂದರ್ಭದಲ್ಲಿ ಬಹಳಷ್ಟು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ನಾಡಿನ ಜನರ ಅಷ್ಟೇ ಏಕೆ ದೇಶದ ಗಮನ ಸೆಳೆದ ಮಹನೀಯರನ್ನು ಪರಿಚಯಿಸಿದ್ದು ಶ್ಲಾಘನೀಯವಾಗಿದೆ. ತಮ್ಮ ದಕ್ಷತೆಯನ್ನು ನೋಡಿ ವಿವಿಧ ರಾಜ್ಯದ ಸಂಘ ಸಂಸ್ಥೆಗಳು ನೀಡಿದ ಬಹುಮಾನದ ಮೊತ್ತವನ್ನು ಮುಟ್ಟದೇ ಬೇರೆ ಬೇರೆ ಆಸ್ಪತ್ರೆಗಳಿಗೆ, ಸೈನಿಕರ ಕಲ್ಯಾಣ ನಿಧಿಗೆ ನೀಡಿದಂತಹ ಮಹಾನ್ ವ್ಯಕ್ತಿ. ಯಾವುದೇ ರಾಜಕಾರಣಿಗಳ, ಅಧಿಕಾರಿಗಳ ಒತ್ತಡಕ್ಕೆ ಸೋಪ್ಪು ಹಾಕದೇ ನಾಡಿಗಾಗುವ ಅನ್ಯಾಯವನ್ನು ತಡೆಯುವಲ್ಲಿ ಯಶಸ್ವಿಯಾದ ದಕ್ಷ ಅಧಿಕಾರಿ. ಮನುಷ್ಯನಿಗೆ ತೃಪ್ತಿ ಮತ್ತು ಮಾನವೀಯತೆ ಇದ್ದರೆ ಯಾವುದೇ ಭ್ರಷ್ಟತೆಗೆ ಅವಕಾಶ ಇಲ್ಲವೆಂತಲೂ ಈಗಿನ ಪೀಳಿಗೆ ಸದರಿ ಗುಣಗಳನ್ನು ಬೆಳಸಿಕೊಳ್ಳುವಂತೆಯೂ ಅವರು ನೀಡಿದ ಸಂದೇಶ ಬಹಳ ಉದಾತ್ತವಾದುದು. ಇಂಥ ಅಪರೂಪದ ಮಹನೀಯರನ್ನು ಪರಿಚಯಿಸಿದ್ದು

ವಾರದ ಪತ್ರ

## ಕ್ರೀಡೆಗೂ ಮಾನ್ಯತೆ ಇರಲಿ

ವೀಕೆಂಡ್ ವಿಥ್ ರಮೇಶ್ ಒಂದು ಒಳ್ಳೆಯ ಕಾರ್ಯಕ್ರಮ ಎಂಬುದರಲ್ಲಿ ಸಂದೇಹವಿಲ್ಲ. ಇತ್ತೀಚೆಗೆ ಒಬ್ಬ ಉದಯೋನ್ಮುಖ ಕಲಾವಿದರನ್ನು ಅಲ್ಲಿ ಕರೆತಂದಿದ್ದು ಸರಿಯಲ್ಲ ಎಂಬ ಅಭಿಪ್ರಾಯ ಸಾಮಾಜಿಕ ಜಾಲತಾಣ ಗಳಲ್ಲಿ ಪ್ರಕಟವಾಯಿತೆಂದು ಓದಿದೆ. ಸಾಧಕರೆಂದರೆ ಒಂದು ಕ್ಷೇತ್ರದಲ್ಲಿ ಬಹಳ ಕಾಲ ದುಡಿದವರೇ ಆಗ ಬೇಕಿಲ್ಲ. ಇವರುಗಳು ಚರ್ಚಿಸಿದ ಕಲಾವಿದ ನಮ್ಮ ಕನ್ನಡ ಚಲನ ಚಿತ್ರಕ್ಕೆ ಹೊಸ ಆಯಾಮ ತಂದು ಕೊಡುತ್ತಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಾರ್ಯಕ್ರಮ ಅವರಿಗೆ ಇನ್ನಷ್ಟು ಅದೇ ರೀತಿಯಲ್ಲಿ ಬೆಳೆಯಲು ಪ್ರೋತ್ಸಾಹವಾಗುತ್ತದೆ.

ಈ ಟೀಕಾಕಾರರು ಪ್ರತಿದಿನ ದೂರದರ್ಶನದಲ್ಲಿ ಪ್ರಸಾರವಾಗುವ 'ಬೆಳಗು' ನೋಡಬೇಕು. ಅದರಲ್ಲಿ ಬರುವವರೆಲ್ಲ ಬರಿಯ ಹಿರಿ ತಲೆಗಳಲ್ಲ. ಅದೇ ರೀತಿ, ಅವರೆಲ್ಲ ತಮ್ಮ ಕಾರ್ಯಕ್ಷೇತ್ರದಲ್ಲಿ ವಿನೂತನ ಸಾಧನೆ ಮಾಡುತ್ತಿರುವವರೇ ಆಗಿದ್ದಾರೆ. ರಮೇಶ್ ಇನ್ನಷ್ಟು ಸಾಧಕರನ್ನು ಪರಿಚಯಿಸಬಹುದು. ಉದಾಹರಣೆಗೆ ಕ್ರೀಡಾ ಜಗತ್ತಿನಲ್ಲಿ ಸಾಧನೆ ಮಾಡಿದವರು. ಕ್ರಿಕೆಟ್‌ನಲ್ಲಿ ಬಿ.ಎಸ್.ಚಂದ್ರಶೇಖರ, ಇ.ಎ.ಎಸ್.ಪ್ರಸನ್ನ, ಕಿರ್ಮಾನಿ, ಜಿ.ಆರ್. ವಿಶ್ವನಾಥ್, ಶಾಂತಾ ರಂಗಸ್ವಾಮಿ, ಟೇಬಲ್ ಟೆನಿಸ್‌ನ ಉಷಾ ಸುಂದರರಾಜ್, ಕೆ.ಆರ್.ಸರಸ್ವತಿ ಇವರಲ್ಲಿ ಕೆಲವರು. ಅವರು ಆಯಾ ಕ್ರೀಡೆಗಳಲ್ಲಿ ಮಾಡಿದ ಸಾಧನೆಯ ಸಮಯದಲ್ಲಿ ಅವರಿಗೆ ಈಗಿನಂತೆ ಹಣದ ಹೊಳೆ ಹರಿಯುತ್ತಿರಲಿಲ್ಲ. ಇವರೆಲ್ಲ ತಮ್ಮ ತಮ್ಮ ಕ್ರೀಡೆಯನ್ನು ಒಂದು ತಪಸ್ಸಿನಂತೆ ಭಾವಿಸಿ ಹೆಸರು ಮಾಡಿದವರಾಗಿದ್ದಾರೆ. ಬಹುಶಃ ಇಂದಿನ ಕ್ರೀಡಾಪಟುಗಳಿಗೆ ಇವರ ಪರಿಚಯವೇ ಇರುವುದಿಲ್ಲ. ಇಂತಹ ಸಾಧಕರು ಯುವ ಪೀಳಿಗೆಗೆ ಮಾದರಿಯಾಗುತ್ತಾರೆ.

—ಕೆ.ಎಸ್.ಸೋಮೇಶ್ವರ, ಬೆಂಗಳೂರು

'ವೀಕೆಂಡ್ ವಿಥ್ ರಮೇಶ್' 3ನೇ ಭಾಗದ ಕಾರ್ಯಕ್ರಮಕ್ಕೆ ಮತ್ತೊಂದು ಹೆಮ್ಮೆಯ ಗರಿ ಎನಿಸಿತು. ಅನಂತ ಅನಂತ ಧನ್ಯವಾದಗಳು.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ; ನಾರಾಯಣಯಾಜಿ, ಶಿರಾಲಿ; ಸುಂದರ್, ವರಲಕ್ಷ್ಮಿ ಮುಕುಂದ ರಾವ್ ಬೆಂಗಳೂರು

## ಸಿನಿಮಾ ಹಾಡೇ ಏಕೆ?

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಸರಿಗಮಪ ಸೀಸನ್ 13 ರಲ್ಲಿ ಬರೇ ಸಿನಿಮಾ ಹಾಡುಗಳ ನಡುವೆ ಗಿರಕಿ ಹೊಡೆಯುತ್ತಾರೆ. ಸ್ಪರ್ಧಿಗಳಿಗೆ ಭಾವಗೀತೆಗಳನ್ನು ಹೇಳುವ ಅವಕಾಶವನ್ನು ತೀರ್ಪುಗಾರರು ಕೊಡಬಹುದಲ್ಲವೇ...? ಭಾವಗೀತೆಗಳು ಸಂಗೀತದ ಒಂದು ಪ್ರಕಾರವಲ್ಲವೇ...? ಯಾವುದೇ ಸಂಗೀತದ ರಿಯಾಲಿಟಿ ಶೋಗಳು ಕೇವಲ ಸಿನಿಮಾ ಹಾಡಿಗೆ ಮಾತ್ರ ಮೀಸಲೇ...? ಮೈಸೂರು ಅನಂತಸ್ವಾಮಿ, ಸಿ. ಅಶ್ವತ್ಥ್ ಅವರಂತರನ್ನು ನೆನೆಯುತ್ತ ಭಾವಗೀತೆಗಳನ್ನು ಹಾಡಿಸಬಹುದಲ್ಲವೇ?

—ರಾಂಕೊ, ತೀರ್ಥಹಳ್ಳಿ

## ಮದುವೆ ವಾಹಿನಿಗಳಿವು

ಚಲನಚಿತ್ರ ನಟಿ ಅಮೂಲ್ಯಾಳ ಮದುವೆ ಸಮಾರಂಭಗಳು ಆರಂಭವಾದಾಗಿನಿಂದ, ಕನ್ನಡದ ಬಹುತೇಕ ಟಿವಿ ವಾಹಿನಿಗಳು ಮದುವೆ ವಾಹಿನಿಗಳಾಗಿ ಪರಿವರ್ತಿತವಾಗಿವೆ. ಮದುವೆ ನಿಶ್ಚಿತಾರ್ಥದಿಂದ ಆರಂಭವಾಗಿ ಪಂಚತಾರಾ ಹೋಟೆಲ್‌ನಲ್ಲಿ ಅದ್ದೂರಿಯಾಗಿ ನಡೆದ ಆರತಕ್ಷತೆವರೆಗೆ ಒಂದೇ ಒಂದು ಕ್ಷಣ ಮಿಸ್ ಆಗದಂತೆ ಮದುವೆಯ ಸಂಭ್ರಮವನ್ನು ಕನ್ನಡದ ವಾಹಿನಿಗಳು ಹುಚ್ಚು ಸ್ಪರ್ಧೆಯಲ್ಲಿ ವೀಕ್ಷಕರ ಕಣ್ಣು ತುಂಬಿಸಿದವು. ಇದೂ ಸಾಲದೆನ್ನುವಂತೆ, ಮದುವೆ ಸಂಭ್ರಮ ಮುಗಿದ ಮೇಲೂ ದಿನಗಟ್ಟಲೆ ಮದುವೆಯ ದೃಶ್ಯಾವಳಿಗಳನ್ನು ಈ ಚಾನೆಲ್‌ಗಳು ಮೆಲುಕು ಹಾಕುತ್ತಿರುವುದು ಇನ್ನೊಂದು ವಿಶೇಷ.

ಅಮೂಲ್ಯಾಳಂಥ ಸೆಲೆಬ್ರಿಟಿಯ ಮದುವೆಯನ್ನು ವಿಸ್ತೃತವಾಗಿ ಟಿವಿಯಲ್ಲಿ ತೋರಿಸುವುದರಲ್ಲಿ ಯಾವ ತಪ್ಪೂ ಇರುವುದಿಲ್ಲ. ಆದರೆ, ಅದಕ್ಕೊಂದು ಇತಿ ಮಿತಿ ಮತ್ತು ಸ್ವನಿಯಂತ್ರಣ ಇರಬೇಕೆನ್ನುವುದು ವೀಕ್ಷಕರ ನಿರೀಕ್ಷೆ.

ಅಮೂಲ್ಯಾ ಅವರ ವಿವಾಹ ದೃಶ್ಯಗಳನ್ನು ಅರ್ಥಪೂರ್ಣವಾದ, ಮೌಲ್ಯಯುಕ್ತವಾದ ಪರಿಧಿಯಲ್ಲಿ ಪ್ರಸ್ತುತ ಪಡಿಸಬಹುದಾಗಿತ್ತು. ಸಾಮಾನ್ಯವಾಗಿ ಇತರೇ ನಟ, ನಟಿಯರ ಹಾಗೂ ಅವರ ಮಕ್ಕಳ ವಿವಾಹಗಳು ಇದೆ ರೀತಿಯಲ್ಲಿ ಪುನರಾವರ್ತನೆ ಆಗುತ್ತಿವೆ.

—ರಮಾನಂದ ಶರ್ಮಾ, ಬೆಂಗಳೂರು; ಹೆಚ್.ಆರ್.ಕೊಳಗಿ, ಸಾಗರ, ಪೂರ್ಣಿಮಾ ಮೂರ್ತಿ ಬೆಂಗಳೂರು.

## ಮೆಡಿಕಲೀ ಬ್ಲಾಕ್‌ಮೇಲ್

ಕಲರ್ಸ್ ವಾಹಿನಿಯ 'ಪುಟ್ಟಗೌರಿ ಮದುವೆ' ಸುಧೀರ್ಘ ಧಾರಾವಾಹಿಯಲ್ಲಿ ಪುಟ್ಟಗೌರಿಯನ್ನು 'ಮೆಡಿಕಲೀ ಬ್ಲಾಕ್‌ಮೇಲ್' ಮಾಡಿ ಅವಳ ಆರೋಗ್ಯ ಏರುಪೇರಾಗಿ, ಪರಿಸ್ಥಿತಿಗಳಿಗೆ ಹೊಂದಿಕೆ ಆಗುವಂತೆ ಮಾಡಿರುವ ತಂತ್ರಗಾರಿಕೆ ಸಾಗರಿಯ ಕುತಂತ್ರ ಅಮಾನವೀಯ. ಇದನ್ನು ಯಾರೂ ಒಪ್ಪೊಲ್ಲ. ಇಂತಹ ನಂಬಲು ಅನರ್ಹವಾದ ಕಳಪೆ ಮಸಾಲೆಗಳನ್ನು ಸೇರಿಸಿ ಧಾರಾವಾಹಿಯನ್ನು ಇನ್ನಷ್ಟು ಧೀರ್ಘ ಮಾಡುವ ಯೋಚನೆ ಖಂಡನೀಯ. ಇದು ವೈದ್ಯಕೀಯ ರಂಗಕ್ಕೆ ಅವಮಾನಕಾರ. ಹಣದ ಆಸೆಗೆ ಯಾವ ವೈದ್ಯಕೀಯ ವ್ಯಕ್ತಿಯೂ (ಅದೂ ಕ್ಯಾನ್ಸರ್ ವಿಚಾರವಾಗಿ) ಇಷ್ಟೊಂದು ದ್ರೋಹ ಮಾಡಲು ಸಾಧ್ಯವೇ ಇಲ್ಲ. ಈಗ ಗೌರಿ ಬದುಕುತ್ತಾಳೆಂದು ತಿಳಿದು ಸಂತೋಷಪಡಬೇಕೋ, ಸಂಕಟಪಡಬೇಕೋ ತಿಳಿಯದಾಗಿದೆ.

—ಎಂ.ಆರ್. ಕಮಲಮ್ಮ, ರಾಜರಾಜೇಶ್ವರಿನಗರ